

ಶರ್ಲೀ ವರ್ಕ್ ಕಳಿಸಿದ ಆ ಮೆಸೇಜು ಯಾವಾಗಲಾದರೂ ಬರಬಹುದಿತ್ತು; ಅರ್ಧ ಗಂಟೆ ಮೊದಲು, ಇಲ್ಲಾ, ಅರ್ಧ ಗಂಟೆ ತಡೆದು. ಅಥವಾ, ಬೆಳಿಗ್ಗೆಯೋ ಸಂಜೆಯೋ, ನಿನ್ನೆಯೋ ನಾಳೆಯೋ... ಹೀಗೆ, ಯಾವಾಗ ಬೇಕಾದರೂ ಬರಬಹುದಿತ್ತು! ಆದರೆ, ಹೇಳದೆ ಕೇಳದೆ ಬರುವ ಯಾವುದಕ್ಕೂ ಮನುಷ್ಯಾತೀತ ನಿಗದಿಯಿದೆ ಅಂತೆನ್ನುವ ಹಾಗೆ, ಅದು ತನ್ನದೇ ಹೊತ್ತುಗೊತ್ತು ಮಾಡಿಕೊಂಡು ಬಂತು! ಅಷ್ಟೇ ಅತ್ಯನೂಹ್ಯವಾಗಿಯೂ ಬಂತು! ಅಮ್ಮ ಮತ್ತು ಕುಂದಗೌರಿಯ ಒತ್ತಾಯದ ಮೇರೆಗೆ, ಈವರೆಗೆ ಇಂಥವನ್ನೆಲ್ಲ ಮಾಡಿದ್ದಿರದ ನಾನು – ವರ್ಷದ ಅಮಾವಸ್ಯೆಯ ಪಿತೃತರ್ಪಣಕ್ಕೆಂದು ಕುಳಿತೆನಲ್ಲ – ಸರಿಯಾಗಿ ಆವಾಗಲೇ ಉಂಟಾಗಿಬಂತು!!

ವಿಚಿತ್ರವೆಂದರೆ, ನಾನು, ರಾಮಚಂದ್ರಯ್ಯ ಮತ್ತು ಬದರಿನಾಥಯ್ಯ – ಎಂದು, ಅನುಕ್ರಮವಾಗಿ ನನ್ನ ಅಪ್ಪ ಮತ್ತು ಅವರ ಕಡೆಯ ತಮ್ಮನ ಹೆಸರು ಹೇಳಿಕೊಂಡು ಎಳ್ಳುನೀರು ಬಿಡುವುದಕ್ಕೂ, ಶರ್ಲೀ ವರ್ಕ್ ಕಳಿಸಿದ ಮೆಸೇಜು ಬರುವುದಕ್ಕೂ – ಸರಿಹೊಂದಿ ಬಂದು, ಎರಡರ ನಡುವೆ ಒಂದಕ್ಕೊಂದು ತಾಳೆತಳುಕಿಲ್ಲದ ನಂಟಂತೂ ಏರ್ಪಟ್ಟಿದ್ದು ಹೌದು. ಹಾಗೇ ಒಂದಿಷ್ಟು ಮಾತು ಹುಟ್ಟಿದ್ದೂ ಹೌದು.